# ಮಾರ್ಚ್ 2021ರ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ

**3.3.2021 :** ಸರಕಾರಿ ಪ್ರಥಮ ದರ್ಜೆ ಕಾಲೇಜು ದಾಂಡೇಲಿ ಉ.ಕ ಜಿಲ್ಲೆಯಲ್ಲಿ  ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಮನೋಜ ನಾಯಕ ಜೀವಸಾರ್ಥಕತೆ ಹುಬ್ಬಳ್ಳಿ ಸಂಯೋಜಕರು ಅಂಗಾಂಗ ದಾನದ ಮಹತ್ವ ಕುರಿತು ವಿವರಿಸಿದರು. ಸುಮಾರು 10 ಜನರು ಅಂಗಾಂಗ ದಾನದ ಶಪತ ಮಾಡಿದರು. ಕಾರ್ಯಕ್ರಮವನ್ನು ನವನಗರ ಕ್ಯಾನ್ಸರ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಉಮೇಶ ಹಳ್ಳಿಕೇರಿ ವೈದ್ಯಾಧಿಕಾರಿಗಳು ಸಹ ಮಾತನಾಡಿದರು






**11.3.2021** : ವಿಜಯಪುರದ ಯಶೋದ ಆಸ್ಪತ್ರೆಯಲ್ಲಿ ನಡೆದ ಅಂಗಾಂಗದಾನದ ಜಾಗೃತಿ ಕಾರ್ಯಕ್ರಮ. ವಿಶ್ವ ಮೂತ್ರಪಿಂಡ ದಿನಾಚರಣೆಯ ಅಂಗವಾಗಿ ಯಶೋಧಾ ಆಸ್ಪತ್ರೆಯಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು  ಶ್ರೀ ಶೇಖಪ್ಪ ಕಟ್ಟಿಮನಿ ಜೀವಸಾರ್ಥಕತೆ ಕಲಬುರ್ಗಿ ಸಂಯೋಜಕರು  ಅಂಗಾಂಗ ದಾನದ ಮಹತ್ವ ಕುರಿತು ಮಾತನಾಡಿದರು ಮತ್ತು ಮೂತ್ರಪಿಂಡ ವೈಫಲ್ಯದ ರೋಗಿಗಳ ಬಗ್ಗೆ ಯಶೋಧಾ ಆಸ್ಪತ್ರೆಯ ಎಂ.ಡಿ ಡಾ.ರವೀಂದ್ರ ಮ್ಯಾಡ್ರಿಕ್ ಮಾತನಾಡಿದರು. ಸಿ.ಕೆ.ಡಿ ರೋಗಿಗಳ ತೊಂದರೆಗಳು, ಮೂತ್ರಪಿಂಡ ಕಸಿ ಮಾಡುವಿಕೆಯ ಬಗ್ಗೆ ಮತ್ತು ಪ್ರಾಮುಖ್ಯತೆಯ ಬಗ್ಗೆ. ಡಾ. ಎಚ್ಎಲ್ . ಬಿರಾದಾರ ಪೀಡಿಯಾಟ್ರಿಕ್ಸ್ ನೆಫ್ರಾಲಜಿಸ್ಟ್ ರವರು ಮಕ್ಕಳ ಚಿಕಿತ್ಸೆಯಲ್ಲಿ ಎದುರಿಸುತ್ತಿರುವ ಮೂತ್ರಪಿಂಡದ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾರೆ.









**16.3.2021:** ಕೆ.ಎಲ್.ಎಸ್ ಎಂಜಿನಿಯರಿಂಗ ಕಾಲೇಜು ಹಳಿಯಾಳ ಉ.ಕ ಜಿಲ್ಲೆಯಲ್ಲಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಶ್ರೀ ಮನೋಜ ನಾಯಕ ಜೀವಸಾರ್ಥಕತೆ ಹುಬ್ಬಳ್ಳಿ ಸಂಯೋಜಕರು ಅಂಗಾಂಗ ದಾನದ ಮಹತ್ವ ಕುರಿತು ವಿವರಿಸಿದರು. ಸುಮಾರು 10 ಜನರು ಅಂಗಾಂಗ ದಾನದ ಶಪತ ಮಾಡಿದರು ಕಾರ್ಯಕ್ರಮವನ್ನು ನವನಗರ ಕ್ಯಾನ್ಸರ್ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ. ಉಮೇಶ ಹಳ್ಳಿಕೇರಿ ವೈದ್ಯಾಧಿಕಾರಿಗಳು ಸಹ ಮಾತನಾಡಿದರು.






**17.03.2021 :** ಉತ್ತರ ಕರ್ನಾಟಕದಲ್ಲಿ ಅಂಗಾಂಗ ದಾನ ಮತ್ತು ಕಸಿ ಚಟುವಟಿಕೆಗಳನ್ನು ಹೆಚ್ಚಿಸುವ ಪ್ರಯತ್ನದಲ್ಲಿ, ವೆಬಿನಾರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸರ್ಕಾರದಿಂದ ಆಯೋಜಿಸಲಾಗಿತ್ತು 2021 ರ ಮಾರ್ಚ್ 17 ರಂದು ಸೋಟೋ (ಜೀವಸಾರ್ಥಕತೆ) ಮತ್ತು ಮೋಹನ್ ಫೌಂಡೇಶನ್ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು, ಜಂಟಿ ನಿರ್ದೇಶಕ ಡಾ. ಕಿರಣ್ ಕುಮಾರ್ . ಚರ್ಚೆಯನ್ನು ಪ್ರಾರಂಭಿಸಿ, ಅಂಗಾಂಗದಾನವನ್ನು ಉತ್ತೇಜಿಸುವಲ್ಲಿ ಉತ್ತರ ಕರ್ನಾಟಕ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಬೆಂಬಲಿಸಲು ಸರ್ಕಾರ ಉತ್ಸುಕವಾಗಿದೆ ಎಂದು ತಿಳಿಸಿದರು. ಉಪನಿರ್ದೇಶಕರಾದ ಡಾ. ಸೆಲ್ವರಾಜ ಅವರು ಜಿಲ್ಲಾ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜು ಆಸ್ಪತ್ರೆಗಳನ್ನು ಅಂಗಾಂಗಕಸಿ ರಹಿತ ಪಡೆಯುವಿಕೆ ಕೇಂದ್ರಗಳಾಗಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಸರ್ಕಾರದ ಕ್ರಮಗಳನ್ನು ಶ್ಲಾಘಿಸಿದ ಜೀವಸಾರ್ಥಕತೆಯ ಕನ್ವೀನರ್ ಡಾ. ಕಿಶೋರ್ ಫಡ್ಕೆ ಅವರು ಉತ್ತರ ಕರ್ನಾಟಕ ಆಸ್ಪತ್ರೆಗಳು ಮತ್ತು ಆಸ್ಪತ್ರೆಗಳ ಮುಖ್ಯಸ್ಥರು ನಾಯಕತ್ವ ವಹಿಸಲು ಬಲವಾದ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಬೆಳಗಾವಿಯ ಕೆಎಲ್ಇಎಸ್ ಆಸ್ಪತ್ರೆಯ ಕಿಡ್ನಿ ಫೌಂಡೇಶನ್‌ನ ನಿರ್ದೇಶಕ ಡಾ. ಆರ್ ಬಿ ನೆರ್ಲಿ ಅವರು ಕೆಎಲ್ಇಎಸ್ ಆಸ್ಪತ್ರೆಯಲ್ಲಿ ಎಚ್.ಎಲ್.ಎ ಪ್ರಯೋಗಾಲಯದ ಪ್ರಗತಿಯ ಕುರಿತು ಭಾಗವಹಿಸಿದವರ ಗಮನಕ್ಕೆ ತಂದರು,

ಧಾರವಾಡದ ಎಸ್‌ಡಿಎಂ ಆಸ್ಪತ್ರೆಯಲ್ಲಿ ಅಂಗ ದಾನವನ್ನು ಸುಗಮವಾಗಿ ನಡೆಸಲು ತೆಗೆದುಕೊಂಢ ಕ್ರಮಗಳ ಬಗ್ಗೆ ಡಾ.ಮಕನ್‌ದಾರ ಕಿಲ್ಲೇಧಾರ ಮತ್ತು ಡಾ. ನಾಗೇಶ ವಿವರಿಸಿದರು

ಕಿಮ್ಸ್ ಆಸ್ಪತ್ರೆಯ ಆವರಣದಲ್ಲಿ ಎಚ್‌ಎಲ್‌ಎ ಪರೀಕ್ಷೆ, ಟಿಶ್ಯೂ ಕಲ್ಚರ್ ಲ್ಯಾಬ್ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಲಾಗುವುದೆಂದು ಕಿಮ್ಸ್ ಮೆಡಿಕಲ್ ಸೂಪರಿಟೆಂಡೆಂಟ್ ಡಾ. ಅರುಣ್ ಕುಮಾರ್ ತಿಳಿಸಿದರು.

ಕೆ.ಎಲ್.ಇ.ಎಸ್ ಆಸ್ಪತ್ರೆಯ ಸೀನಿಯರ್ ನರಶಾಸ್ತ್ರಜ್ಞ ಡಾ.ರವಿಶಂಕರ್ ನಾಯಕ್, ಡಾ.ವಿನಯ್ ದಾಸ್ತಿಕೋಪ್ ಬಿಮ್ಸ್ ಬೇಳಗಾವಿ, ಡಾ. ವಿಶಾಖಾ, ಸುಚೀರಾಯು ಆಸ್ಪತ್ರೆ,

ಹುಬ್ಬಳ್ಳಿ, ಡಾ.ಸಫಿಯಾ ಶೇಖ್ ಮತ್ತು ಡಾ.ವಿಶ್ವನಾಥ್ ಕಿಮ್ಸ್ ಹುಬ್ಬಳ್ಳಿಯಿಂದ ತತ್ವಾಧರ್ಷ ಆಸ್ಪತ್ರೆಯ ಡಾ.ಎಸ್.ಪಿ.ಬಳೆಗಾರ, ಉತ್ತರ ಕರ್ನಾಟಕದ ವಿವಿಧ ಆಸ್ಪತ್ರೆಗಳ ಮುಖ್ಯಸ್ಥರು , ಜೀವಸಾರ್ಥಕತೆಯ ಮನೋಜ ನಾಯಕ, ಮೋಹನ ಫೌಂಡೇಶನ್ ಶೀತಲ್ ಹೀಗೆ 80 ಕ್ಕೂ ಹೆಚ್ಚು ಪ್ರತಿನಿಧಿಗಳು ವೆಬ್‌ನಾರ್‌ನಲ್ಲಿ ಭಾಗವಹಿಸಿದರು.

22.03.2021 : ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ ನರ್ಸಿಂಗ್ ಕಾಲೇಜಿನಲ್ಲಿ ನಡೆದ ಜಾಗೃತಿ ಕಾರ್ಯಕ್ರಮ. ಸುಮಾರು 80 ವಿದ್ಯಾರ್ಥಿಗಳು ಭಾಗವಹಿಸಿದ್ದರು, ಜೆಎಸ್.ಕೆ ವೆನ್ಲಾಕ್ ಆಸ್ಪತ್ರೆಯ ಕಸಿ ಸಂಯೋಜಕರಾದ ಶ್ರೀಮತಿ ಲವೀನಾ ಗ್ಲಾಡಿಸ್ ಡಿಸೋಜಾ ಅಂಗಾಂಗ ದಾನ, ಕಸಿ ಮಾಡುವ ವಿಧಾನಗಳು, ಮಿದುಳಿನ ಸಾವಿನ ಕಾರ್ಯವಿಧಾನದ ಪರಿಕಲ್ಪನೆ, ಪ್ರತಿಜ್ಞಾ ವ್ಯವಸ್ಥೆ, ಮಂಗಳೂರು ವಲಯದ ಸದಸ್ಯ ಆಸ್ಪತ್ರೆಗಳು, ಪಾತ್ರಗಳು ಮತ್ತು ಜೀವಸರ್ಥಕಥೆಯ ಜವಾಬ್ದಾರಿಗಳು. ಕುರಿತು ವಿವರಿಸಿದರು.





**22.3.2021:** ಆದರ್ಶ ಪೌಡಶಾಲೆ ಧಾರವಾಡದಲ್ಲಿ ನಡೆದ  ಜಾಗೃತಿ ಕಾರ್ಯಕ್ರಮದಲ್ಲಿ ಅಂಗಾಂಗ ದಾನದ ಮಹತ್ವದ ಕುರಿತು ಮನೋಜ ನಾಯಕ ನಾಯಕ  ಜೀವಸಾರ್ಥಕತೆ ಹುಬ್ಬಳ್ಳಿ ಸಂಯೋಜಕರು  ಭಾಗವಹಿಸಿ ಅಂಗಾಂಗದಾನದ ಕುರಿತು ವಿವರಿಸಿದರು ನಚಿಕೇತ ಮತ್ತು ಸಮೀರ 8 ಲೈವ ಗ್ರೂಪನಿಂದ ಭಾಗವಹಿಸಿ ಅಂಗಾಂಶ ಮತ್ತು ಗ್ರೀನ ಕಾರಿಡಾರ ಕುರಿತು ಮಾಹಿತಿ ನೀಡಿದರು.











**25.03.2021:** ಕರ್ನಾಟಕ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ಅಶೋಕ್ ನಗರ ಮಂಗಳೂರಿನಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಿತು. ಆಯುರ್ವೇದ ವೈದ್ಯಕೀಯ ಕಾಲೇಜಿನ ಸುಮಾರು 50 ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು, ಜೀವಸಾರ್ಥಕತೆಯ ಶ್ರೀಮತಿ ಪದ್ಮಾವತಿ ಕಸಿ ಸಂಯೋಜಕರು ಅಂಗಾಂಗ ದಾನ ಮತ್ತು ಕಸಿ ವಿಧಾನಗಳು, ಅಂಗಾಂಗ ದಾನದ ಮಹತ್ವ, ಮಿದುಳಿನ ಸಾವಿನ ಪರಿಕಲ್ಪನೆ, ಕಸಿ ಮಾಡುವ ವಿಧಾನಗಳು, ಪ್ರತಿಜ್ಞಾ ವ್ಯವಸ್ಥೆ, THOA ಕಾಯ್ದೆ 1994, ಶ್ರೀಮತಿ. ಲವೀನಾ ಡಿಸೋಜಾ ಕಸಿ ಸಂಯೋಜಕರು ಜೀವಸಾರ್ಥಕತೆಯ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಪಿಪಿಟಿಯ ಮೂಲಕ ವಿವರಿಸಿದರು.







